ಈ) ಈಗ ಬಿಟ್ಟು ಹೋಗಿರುವ ರಸ್ತೆಗಳಿಗೆ 2002-03 ರ ಕಾರ್ಯಕ್ರಮದ ಅಡಿಯಲ್ಲಿ ಒಟ್ಟು ಆರು ಲಕ್ಷಗಳು ಮಂಜೂರಾಗಿದ್ದು, ರಸ್ತೆ ಬದಿಯ ಮೋರಿಯ ಕೆಲಸವನ್ನು ಸದ್ಯದಲ್ಲಿಯೇ ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ ಹಾಗೂ ಮಳೆಗಾಲದ ನಂತರ ಡಾಂಬರೀಕರಣಗೊಳಿಸಲಾಗುವುದು.

ಶ್ರೀ ಶಿವಶೇಖರಪ್ಪಗೌಡ ಶಿರವಾಳ : ಮಾನ್ಯ ಅಧ್ಯಕ್ಷರೆ, ಭುವನೇಶ್ವರಿ ನಗರವು ಮಹಾನಗರಪಾಲಿಕೆಗೆ 1996ರಲ್ಲಿ ಸೇರಿದ್ದು, ಇದುವರೆವಿಗೂ ಈ ಪ್ರದೇಶಕ್ಕೆ 13 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗೆಯೇ, 2002-2003ನೇ ಸಾಲಿನಲ್ಲಿ ಕೆಲವು ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಇನ್ನು ಉಳಿದಂಥ ಕೆಲಸಗಳನ್ನು ಮಳೆಗಾಲ ಮುಗಿದ ನಂತರ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ. ಈಗಾಗಲೇ ಆ ಪ್ರದೇಶದವರು ಬಿಡಿಎಗೆ ಬೆಟರ್‌ಮೆಂಟ್ ಚಾರ್ಜ್ ಕಟ್ಟಿದ್ದಾರೆ. ಹಾಗೆಯೇ ಇಲ್ಲಿ ಸಾಕಷ್ಟು ಮನೆಗಳೂ ಕೂಡ ನಿರ್ಮಾಣವಾಗಿದೆ. ಆದರೆ, ಇನ್ನು ಆಪ್ರದೇಶ ಅಭಿವೃದ್ಧಿಯಾಗಿಲ್ಲ. ಆದ್ದರಿಂದ ಆ ಪ್ರದೇಶದಲ್ಲಿ ಬರತಕ್ಕಂಥ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿರತಕ್ಕಂಥ ಎಲ್ಲಾ ಅಡ್ಡ ರಸ್ತೆಗಳಿಗೆ ಒಮ್ಮೆ ಡಾಂಬರೀಕರಣ ಮಾಡತಕ್ಕಂಥ ಕೆಲಸ ಕೈಗೆತ್ತಿಕೊಳ್ಳಬೇಕಾದರೆ, ಅಗಾಧವಾದಂಥ ಸಂಪನ್ಮೂಲಗಳು ಬೇಕಾಗುತ್ತದೆ. ಸಂಪನ್ಮೂಲಗಳು ದೊರಕುತ್ತಿರುವಂತೆ ನಾವು ಡಾಂಬರೀಕರಣ ಕೆಲಸವನ್ನು ಮಾಡಬೇಕಾಗುತ್ತದೆ. 2002-03ನೇ ಸಾಲಿನಲ್ಲಿ ಕಾರ್ಯಕ್ರಮದ ಅಡಿಯಲ್ಲಿ 6 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಲಿಕ್ಕೆ ಟೆಂಡರ್‌ನ್ನು ಕರೆದಿದ್ದಾರೆ. ಮಳೆಗಾಲ ಆದನಂತರ ಆ ಕೆಲಸವನ್ನು ಕೈಗೆತ್ತಿಕೊಳ್ಳುತ್ತಾರೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್: 6 ಲಕ್ಷ ರೂಪಾಯಿ ಕೆಲಸವನ್ನು ಮಾಡುವುದಕ್ಕೆ ಟೆಂಡರ್ ಕರೆದು ರಸ್ತೆ ಅಭಿವೃದ್ಧಿ ಪಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಈಗ ಹೇಳಿದ್ದಾರೆ. ಆದ್ದರಿಂದ, ಅಲ್ಲಿ ಅನೇಕ ರಸ್ತೆಗಳಿಗೆ ಡಾಂಬರೀಕರಣ ಮಾಡತಕ್ಕಂಥ ಅವಶ್ಯಕತೆ ಇರುವುದರಿಂದ ಮುಂದೆ ಮಾಡತಕ್ಕಂಥ ಕೆಲಸದಲ್ಲಿ ಇದನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರ ಸಲಹೆಯನ್ನು ಸ್ವೀಕರಿಸುತ್ತೇನೆ.

ಆನೇಕಲ್ ಕ್ಷೇತ್ರದಲ್ಲಿ ವಿದ್ಯುತ್ ವಿತರಣೆ ಉಪಕೇಂದ್ರಗಳು

155 (1217) - ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ಕ್ಷೇತ್ರದಲ್ಲಿ ಸ್ಥಾಪಿಸಲು ಉದ್ದೇಶಿರುವ ವಿದ್ಯುತ್ ವಿತರಣೆ ಉಪ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ವಿದ್ಯುತ್ ವಿತರಣೆ ಉಪ ಕೇಂದ್ರಗಳಿಗೆ ಅಗತ್ಯವಿರುವ ಜಾಗ ಮೀಸಲಿಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಸ್ಥಾವರಗಳ ಅಂದಾಜು ತಯಾರಿಸಿದ ಟೆಂಡರ್ ಅಖೈರಾಗಿರುವ ಮತ್ತು ಕಾಮಗಾರಿ ಪ್ರಾರಂಭದ ಆದೇಶಕ್ಕೆ ಕಾದಿರುವ ಉಪ ಸ್ಥಾವರಗಳ ವಿವರ ನೀಡುವುದು.

ಈ) ಸ್ಥಾವರಗಳ ಸ್ಥಾಪನೆಗೆ ವಿಳಂಬ ಮಾಡುತ್ತಿರಲು ಕಾರಣಗಳೇನು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮೂರು

ಆ) ಹೌದು

ಇ) 1. ಬನ್ನೇರುಘಟ್ಟ ಸ್ಥಾವರದ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಗುತ್ತಿಗೆ ಕೊಡಲಾಗಿದ್ದು, ಕೆಲಸವು ಪ್ರಗತಿಯಲ್ಲಿರುವುದು 2. ಅತ್ತಿಬೆಲೆ ಸ್ಥಾವರಕ್ಕೆ ನಿಗಮದ ತಾಂತ್ರಿಕ ಸಮಿತಿ ಅನುಮೋದನೆ ನೀಡಿದ್ದು, ಭೂ ಸ್ವಾಧೀನದ ಕಾರ್ಯ ಪ್ರಗತಿಯಲ್ಲಿದೆ. 3. ಆನೇಕಲ್ ಸ್ಥಾವರಕ್ಕೆ ಗುತ್ತಿಗೆದಾರರನ್ನು ನೇಮಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಎಲ್ಲಾ ಕ್ರಮಗಳು ಮತ್ತು ಕಾರ್ಯ ವಿಧಾನಗಳನ್ನು ಅನುಸರಿಸಿ ಮುಂದಿನ ಕ್ರಮ ಜರುಗಿಸಲಾಗುವುದು.

ಈ) ಈಗಾಗಲೇ ಈ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ವಿಳಂಬದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ. ನಾರಾಯಣ ಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅವರು ಕೊಟ್ಟಿರತಕ್ಕಂಥ ಉತ್ತರ ಪ್ರಾಮಾಣಿಕವಾಗಿದೆ. ನನ್ನ ಕ್ಷೇತ್ರವಾದ ಆನೇಕಲ್ ನಗರದಲ್ಲಿ ಸುಮಾರು 100ಕ್ಕೆ 80 ರಷ್ಟು ನೇಕಾರರು ಇದ್ದಾರೆ. ಇಲ್ಲಿ ಬಹುತೇಕ ನೇಕಾರರು ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡು ತಮ್ಮ ಸ್ವಂತ ಮನೆಗಳಲ್ಲಿ ನಾಲ್ಕೈದು ವಿದ್ಯುತ್ ಮಗ್ಗಗಳನ್ನು ಇಟ್ಟುಕೊಂಡಿದ್ದಾರೆ. ಈಗ ಅಲ್ಲಿ ಸ್ಥಾವರವನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದನ್ನು ಅಲ್ಲಿ ಪ್ರಾರಂಭ ಮಾಡುವುದಕ್ಕೆ ನಾಲ್ಕು ವರ್ಷಗಳಾಗಿದ್ದು, ಇದಕ್ಕೆ ಟೆಂಡರ್ ಕೂಡ ಕರೆದಿದ್ದು, ಸದರಿ ಟೆಂಡರ್ ಅಕ್ಸೆಪ್ಟ್ ಕೂಡ ಆಗಿದೆ. ಟೆಂಡರ್ ಒಪ್ಪಿಕೊಂಡು ಈಗಾಗಲೇ ಎರಡು ತಿಂಗಳಾಗಿದೆ. ಆದರೆ, ಆ ಟೆಂಡರ್ ಪತ್ರವನ್ನು ಗುತ್ತಿಗೆದಾರನಿಗೆ ಕೊಡುವುದಕ್ಕೆ ತಾವು ಹಿಂದು-ಮುಂದು ನೋಡುತ್ತಿದ್ದೀರಿ. ಇದು ನನಗೇನೂ ಅರ್ಥವಾಗುತ್ತಿಲ್ಲ. ರೇಷ್ಮೆ ನೇಕಾರರ ಉದ್ಯಮದ ಸಮಸ್ಯೆ ಬಗ್ಗೆ ಇಡೀ ರಾಜ್ಯಕ್ಕೆ ಗೊತ್ತಿದೆ. ವಿದ್ಯುತ್ ಕೈಮಗ್ಗಕ್ಕೆ ಇವತ್ತಿನ ದಿವಸ ಸರಿಯಾದ ವೋಲ್ಟೇಜ್ ಇಲ್ಲದೆ ಇರುವುದರಿಂದ ಮೋಟಾರುಗಳು ಸುಟ್ಟು ಹೋಗಿದ್ದು, ಸದರಿ ಮೋಟಾರುಗಳನ್ನು ರಿಪೇರಿ ಮಾಡಿಸಲು ಕೈಮಗ್ಗಗಳನ್ನೇ ಮಾರಾಟ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯದಲ್ಲಿ ವೋಲ್ಟೇಜ್ ಯಾವ ರೀತಿ ಇದೆ ಎನ್ನತಕ್ಕಂಥದ್ದು ಎಲ್ಲರಿಗೂ ಸಹ ಗೊತ್ತಿದೆ. ಆದ್ದರಿಂದ ಆ ಸ್ಥಾವರನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಕ್ಷೇತ್ರದಲ್ಲಿ ಮೂರು 66 ಕೆ.ವಿ. ಸಬ್-ಸ್ಟೇಷನ್‌ಗಳ ಕೆಲಸ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಟೆಂಡರ್ ಅಂತಿಮಗೊಳಿಸಿ ಎರಡು ತಿಂಗಳಾಗಿದೆ ಎಂದು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಇದರಿಂದ ಕೆಲಸ ವೇಗವಾಗಿ ಆಗುತ್ತಿಲ್ಲವೆಂದು ಹೇಳಿದರು. ಆದರೆ, ಬನ್ನೇರುಘಟ್ಟದಲ್ಲಿ 66 ಕೆ.ವಿ. ಸಬ್ ಸ್ಟೇಷನ್‌ಗಳ ಕೆಲಸವನ್ನು ಈ ವರ್ಷದಲ್ಲಿ ಮುಗಿಸುತ್ತೇವೆ. ಇನ್ನು ಆನೇಕಲ್‌ಗೆ ಸಂಬಂಧಪಟ್ಟಂತೆ ಟೆಂಡರ್ ಕಾಲ್‌ಫರ್ ಮಾಡಿದ್ದೇವೆ. ಇಲ್ಲಿಯೂ ಕೂಡ ಗುತ್ತಿಗೆದಾರರು ಬಂದರೆ ಇದನ್ನು ಆದಷ್ಟು ಬೇಗ ಬಗೆಹರಿಸಬಹುದು. ಅತ್ತಿಬೆಲೆ ಸಬ್‌ಸ್ಟೇಷನ್ ಕೂಡ ಬಜೆಟ್‌ನಲ್ಲಿ ಟಕ್ನಿಕಲ್ ಅಪ್ರೂವಲ್ ಆಗಿದೆ, ಲ್ಯಾಂಡ್‌ನ್ನೂ ಕೂಡ ಕೆಐಡಿಬಿ ಯಿಂದ ಪರ್ಚೇಸ್ ಮಾಡಲಾಗಿದೆ.

ಇದಕ್ಕೆ ಅಡ್ಮಿನಿಸ್ಟ್ರೇಟ್ ಅಪ್ರೂವಲ್ ಕೂಡ ಆಗಿದೆ, ಇವೆಲ್ಲಾ ಕೆಲಸಗಳನ್ನು ಆದಷ್ಟು ಬೇಗನೆ ಪ್ರಾರಂಭ ಮಾಡಿ ಪೂರ್ತಿಗೊಳಿಸಲಾಗುವುದೆಂದು ತಮಗೆ ಹೇಳುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಆನೇಕಲ್ ಪಕ್ಕದಲ್ಲಿ ಸ್ಥಾಪಿಸುವ ವಿದ್ಯುತ್ ಸ್ಥಾವರದ ಬಗ್ಗೆ ಕೇಳುತ್ತಿರುವುದು, 5 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದೆ, ಅದಕ್ಕೆ ಟೆಂಡರ್ ಆಗಿ, ಅದಕ್ಕೆ ಟೈಪ್ ಆಗಿ ಸಹಿ ಕೂಡ ಆಗಿ ಅದನ್ನು ಕೊಡುವ ಸಮಯದಲ್ಲಿ ಕಳೆದ ಎರಡೂವರೆ ತಿಂಗಳಿಂದ ಕೊಡುವುದಕ್ಕೆ ನಿಮಗೆ ಏನು ತೊಂದರೆ?

ಶ್ರೀ ಬಸವರಾಜ ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ನನ್ನ ಗಮನಕ್ಕೆ ಬಂದಿಲ್ಲ, ನನ್ನ ಗಮನಕ್ಕೆ ಬಂದ ನಂತರ ಈಗ ನಾವು ಕಾಲ್‌ಫಾರ್ ಮಾಡಿದ್ದೇವೆ, ಅದನ್ನು ಆದಷ್ಟು ಬೇಗ ಟೆಂಡರ್ ಕರೆದದ್ದನ್ನು ಇತ್ಯರ್ಥಗೊಳಿಸುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದು ತಪ್ಪು ಮಾಹಿತಿ, ಆ ಕಡತದ ಹಿಂದೆ ನಾನಿದ್ದೇನೆ, ಬಹುತೇಕ ನಾನು ಎಲ್ಲಾ ಕಛೇರಿಗಳಿಗೂ ಅದರ ಬಗ್ಗೆ ಓಡಾಡಿದ್ದೇನೆ. ನನಗೆ ಒಂದು ನೋವಾಗುತ್ತದೆ, ಟೆಂಡರ್ ಕಾಪಿಯ ಪ್ರತಿಯನ್ನು ಸಂಸ್ಥೆಗೆ ಕೊಡುವಾಗ ವಿಧಾನಸೌಧದಿಂದ ತಡೆಯಾಗುವುದು ಸಂಸ್ಕಾರವಲ್ಲ. ಇದನ್ನು ನಾನು ನಿಜವಾಗಲೂ ನೋವಿನಿಂದ ಹೇಳುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ನಿರ್ದಿಷ್ಟವಾದ ದಿನಾಂಕವನ್ನು ಹೇಳಿದರೆ ಸೂಕ್ತವಾಗುತ್ತದೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳ ಕಛೇರಿಗೆ ಹೋಗಿ ತಾವು ಅವರೊಡನೆ ಡಿಸ್‌ಕಸ್ ಮಾಡಿ

ಶ್ರೀ ಬಸವರಾಜ ಪಾಟೀಲ್: ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗನೆ ಮಾನ್ಯ ಶಾಸಕರ ಬೇಡಿಕೆಯನ್ನು ಪೂರೈಸುತ್ತೇವೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತುಮ್ಮಲಕುಂಟಾ ಬಳಿ ಹೊಸಕೆರೆ ನಿರ್ಮಾಣ

156(1226) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತುಮ್ಮಲಕುಂಟಾ ಹತ್ತಿರದ ಹೊಸಕೆರೆ ನಿರ್ಮಾಣಕ್ಕಾಗಿ ಟೆಂಡರು ಆಗಿ ತಡೆಯಾಜ್ಞೆಯಿಂದ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒಂದು - ಒಂದೂವರೆ ವರ್ಷದಿಂದ ಇಲಾಖೆಯವರು ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿ ತಡೆಯಾಜ್ಞೆಯನ್ನು ತೆರವು ಮಾಡಿಸಲು ಪ್ರಯತ್ನ ಮಾಡಿಲ್ಲದಿರಲು ಕಾರಣಗಳೇನು;

ಇ) ಈಗಲಾದರೂ ತಡೆಯಾಜ್ಞೆ ತಂದಿರುವ ಅಲ್ಪಸ್ವಲ್ಪ ಸ್ಥಳವನ್ನು ಬಿಟ್ಟು ಅಥವಾ ತಡೆಯಾಜ್ಞೆ ತೆರವಾಗುವಂತೆ ಮಾಡಿ ಸರ್ಕಾರವು ಕೆರೆಯ ನಿರ್ಮಾಣಕ್ಕೆ ಕ್ರಮ ವಹಿಸುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಹೌದು.

ಆ) ತಡೆಯಾಜ್ಞೆಯನ್ನು ತೆರವುಗೊಳಿಸಲು ಇಲಾಖೆ ವತಿಯಿಂದ ಈಗಾಗಲೇ ಸೇಡಂ ತಾಲ್ಲೂಕು ಮುನ್ಸಿಫ್ ನ್ಯಾಯಾಲಯದಲ್ಲಿ ಕಂಡಿಕೆವಾರು ಉತ್ತರವನ್ನು ಸಲ್ಲಿಸಲಾಗಿದೆ.